ಯಾರ್ ಬರ್ತಾರೆ ಈಗೆಲ್ಲಾ, ನಮ್ಮಲ್ಲಿ ಒಳ್ಳೊಳ್ಳೆ ಐತಿಹಾಸಿಕ ಪ್ರಸಂಗಗಳುಂಟು, ಬೆಳಿಗ್ಗಿನದ್ರೂ ಕಣ್ಣೂ ಬಾಯಿಬಿಟ್ಟು ನೋಡ್ತಾರೆ, ನೀವ್ ಪ್ರತೀ ಸಲ ಪೌರಾಣಿಕ ಮಾಡುದ್ಕಿಂತ, ಒಮ್ಮ ಐತಿಹಾಸಿಕ ಮಾಡ್ ನೋಡಿ, ಆಮೇಲ್ ಜನ ನೋಡಿ' ಎಂದು ಮೇಳದ ಯಜಮಾನ ರಾಮಾಚಾರ್ರು ಕೂಡ ಹೇಳಿದ್ದರು.

'ಸರಿ ಹಾಗಾದ್ರೆ, ಈ ಸಲ ಒಳ್ಳೆ ರೈಸುವ ಐತಿಹಾಸಿಕ ಪ್ರಸಂಗವೇ ಮಾಡಿ, ಆದ್ರೆ ಒಂದೆರಡು ಪದ್ಯಕ್ಕೆ ನಮ್ಗೆ ಬೇಕಾದ ಭಾಗವತನನ್ನು ಅತಿಥಿಯಾಗಿ ಕರೆಸ್ಬೋದಲ್ಲಾ' ಎಂದದ್ದಕ್ಕೆ, 'ಹೋ ಅದ್ಕೇನಂತೆ ಒಂದೆರಡು ಪದ್ಯಕ್ಕ್ ಅಡ್ಡಿಲ್ಲ, ಆಟ ಮಾಡ್ಸುವವರು ನೀವು, ಟಿಕೇಟ್ ಆಟ ಆದ್ರೆ ನಮ್ಗ್ ಸ್ವಲ್ಪ ಕಷ್ಟ ಆಗ್ತಿತ್ತು. ಆದ್ರೆ ಇದು ಫ್ರೀ ಬಯಲಾಟ. ಹಾಗಾಗಿ ಅಡ್ಡಿಲ್ಲ' ಎಂದರು ರಾಮಾಚಾರ್ರು.

ಹಾಗೆ ಅವರ ನಿರೀಕ್ಷೆಯಂತೆ, ಜನ ಜಾತ್ರೆ ಸೇರುವ ಒಂದು ಅಮೋಘ ಭರವಸೆಯಲ್ಲಿ ಆಯೋಜನೆಗೊಂಡದ್ದು, 'ಗಗನಮುಖಿ ಸೂರ್ಯಸಖಿ' ಎನ್ನುವ ರೋಚಕ ಕಥಾನಕ. ಬೇಕಾದಷ್ಟು ಹಾಸ್ಯ, ಭಾವನೆ ಕೆರಳಿಸುವ ಪ್ರೇಮದ ಸನ್ನಿವೇಶಗಳು, ಒಂದಷ್ಟು ನಿಗೂಢತೆ, ಯಾರು ಶತ್ರು, ಯಾರು ಮಿತ್ರ ಎಂದು ಪ್ರೇಕ್ಷಕರು ಅಂದಾಜು ಮಾಡಲಾಗದಂತಹ ಪಾತ್ರಗಳು, ಏರು ಸ್ವರದ ಪದ್ಯಗಳು, ಒಮ್ಮೆ ಸಿನಿಮಾ ಹಾಡಿನಂತೆ ಕೇಳಿಸಿ, ಮತ್ತೊಮ್ಮೆ ಯಕ್ಷಗಾನದ ಸ್ವರದಲ್ಲಿ ಅಮಲೇರಿಸುವ ವಿಚಿತ್ರ ಹಾಡುಗಳನ್ನೊಳಗೊಂಡ ಈ ಪ್ರಸಂಗವನ್ನು ನೋಡಲು ಡೇರೆಯೊಳಗೆ ರಾಶಿ ರಾಶಿ ಜನಗಳೇ ಸೇರಿದ್ದರು. ಊಟಕ್ಕೆ ಬಂದಷ್ಟೇ ಜನ ಆಟಕ್ಕೂ ಬಂದರಲ್ಲ ಎಂದು ಅಣ್ಣಪ್ಪ ನಾಯಕ್ರು ಬೀಗಿದರು.

ಡೇರೆಯ ಆಚೀಚೆ ಸೇರಿದ್ದ ಚುರುಮುರಿ ಗಾಡಿಗಳು, ಪಾತ್ರೆಗೆ ಡಬ ಡಬ ಸೌಟು ಹೊಡೆಯುತ್ತ ಜನಗಳನ್ನು ಕರೆಯುತ್ತಿದ್ದರೆ, ಇನ್ನೊಂದು ಕಡೆ ನಿಂತ ಪೋಡಿಯ ಗಾಡಿಯ ಯಜಮಾನ, ಎಣ್ಣೆಯಿಂದ ಆಗತಾನೇ ಎಲೆಕೋಸು, ಬಟಾಟೆ, ಗುಳ್ಳ, ಮೆಣಸು ಪೋಡಿಗಳನ್ನು ಎತ್ತಿ ಎತ್ತಿ ದೊಡ್ಡ ಬಟ್ಟಲಿಗೆ ಹಾಕಿ, 'ಬನ್ನಿ ಬನ್ನಿ ಪೋಡಿ ಪೋಡಿ' ಎಂದು ಕರೆಯುತ್ತಿದ್ದ. ಆ ಚುರುಮುರಿ, ಪೋಡಿ, ಟೀ ಸ್ಟಾಲ್‌ಗಳ ಬೆಚ್ಚಗಿನ ಪರಿಮಳವೆಲ್ಲಾ ತೇಲಿ ಡೇರೆಯ ಕತ್ತಲೊಳಗೆ ಆರಾಮಕುರ್ಚಿಯಲ್ಲಿ ಕೂತಿದ್ದವರಿಗೆಲ್ಲಾ ತಿನ್ನುವಂತೆ ಆಮಂತ್ರಣ ನೀಡುತ್ತಿತ್ತು. ಕೆಲವರಿಗೆ ಆ ಪರಿಮಳವೇ ತಾವು ಸ್ವರ್ಗದ ತುದಿಯಲ್ಲಿ ಕೂತು ರಾತ್ರಿ ಕಳೆಯುತ್ತಿದ್ದೇವೆ ಎನ್ನುವ ಭಾವ ಒಂದರೆಕ್ಷಣ ಉಂಟಾಗುವಂತೆ ಮಾಡುತ್ತಿತ್ತು.

ಅಣ್ಣಪ್ಪ ನಾಯ್ಕರು ಮಹೋನ್ನತ ಧಿಮಾಕಿನಿಂದ ಅಡ್ಡಾಡುತ್ತ ಊರವರನ್ನೆಲ್ಲಾ ನಕ್ಕು ಮಾತಾಡಿಸಿ, ಆಟ ನೋಡಲು ಕೂತರು. ರಾತ್ರಿ 10ಕ್ಕೆ ಶುರುವಾದ ಆಟ ನಕ್ಕು ನಗಿಸಿ, ಪಾತ್ರ, ಸಂಭಾಷಣೆ, ಸನ್ನಿವೇಶಗಳಿಂದ ಎಲ್ಲರನ್ನೂ ಕಾಡಿಸಿತು. ರಾಧಾಕೃಷ್ಣ ಭಾಗವತರು ಒಳ್ಳೆಯ ಅಬ್ಬರದಿಂದ ಕೂತಿದ್ದವರ ಚಳಿ ಓಡುವಂತೆ ಪದ್ಯ ಹಾಡಿದರು.

ಡಿಸೆಂಬರ್ ತಿಂಗಳಾದ್ದರಿಂದ ಆಚೆ ಆಗುಂಬೆ, ಈಚೆ ಸೀತಾನದಿಯ ಗುಡ್ಡದ ನಡುವಿನಲ್ಲಿರುವ ಕುಚ್ಚೂರಿನಲ್ಲಿ ಮಂಜು, ಕತ್ತಲಿನಲ್ಲೂ ಕಾಣಿಸುವಂತೆ ಮಿನುಗಿ ಇಡೀ ಡೇರೆಮೇಳಕ್ಕೆ ಇನ್ನೊಂದು ಬೆಳ್ಳಗಿನ ಡೇರೆ ಹಾಕಿದಂತೆ ಕಾಣಿಸುತ್ತಿತ್ತು. ಸುತ್ತಲಿನ ಕಾಡುಗಳ ಮರಗಳು ಗಾಳಿ ಬೀಸಿದಾಗ ಆ ಮಂಜಿನ ಪರದೆ ಡೇರೆಯೊಳಗೆ ವೇಷಧಾರಿ ಕುಣಿದಂತೆ ಕುಣಿಯುತ್ತಿತ್ತು. ಡೇರೆಯೊಳಗೂ ದಟ್ಟವಾಗಿ ಚಳಿ ಆವರಿಸುತ್ತಿದ್ದಂತೆಯೇ ಒಂದಷ್ಟು ಜನ ಮಫ್ಲರು, ಮಂಕಿಕ್ಯಾಪು, ಚಳಿ ಜಾಕೆಟ್ಟು, ತಲೆ, ಕಿವಿಗೆ ಟವಲ್ಲು, ಹಾಕಿ ಬರೀ ಎರಡು ಕಣ್ಣು ಮಾತ್ರ ಪಿಳಿ ಪಿಳಿ ಕಾಣುವಂತೆ ಮುದುಡಿ ಕೂತು ಬೆಚ್ಚಗೇ ಆಟ ನೋಡತೊಡಗಿದರು.

ಅಣ್ಣಪ್ಪ ನಾಯ್ಕರು ಎದ್ದು ಡೇರೆಯಿಂದ ಹೊರನಡೆದು ಮಂಜು ತುಂಬಿಕೊಂಡು ಅಸ್ಪಷ್ಟವಾಗಿದ್ದ ದಾರಿಯನ್ನು ನೋಡುತ್ತ ನಿಂತರು. ತನಗೆ ಬೇಕಿದ್ದವರು ಕಾಣದಾದಾಗ ಮುಖ ಸಪ್ಪೆ ಮಾಡಿಕೊಂಡು ಅಲ್ಲೇ ಶತಪಥ ಹೆಜ್ಜೆ ಹಾಕತೊಡಗಿದರು. ಅಷ್ಟಕ್ಕೂ ಅವರು ಕಾಯುತ್ತಿರುವುದು ಸೀತಾನದಿ ಗಿರಿಧರನನ್ನು. ಒಂದೆರಡು ಪದ್ಯ ಅವನಿಂದ ಹಾಡಿಸ್ತೇನೆ, ಎಂದು ಆಸೆಯಿಂದ ಕಾಯುತ್ತಿದ್ದ ಅವರಿಗೆ ದಾರಿಯಲ್ಲಿ ಗಿರಿಧರನ ಪತ್ತೆಯೇ ಇಲ್ಲದೇ ದಾರಿಪೂರ್ತಿ ಮಂಜಿನ ಕೋಟೆಯಷ್ಟೇ ಕಂಡಾಗ ಬೇಸರವಾಯಿತು.

ಗಿರಿಧರ ಬರೀ ಗಿರಿಧರನಾಗಿದ್ದ ಕಾಲವದು. ಬಾಲ್ಯದಲ್ಲೇ ಸಂಗೀತವನ್ನು ಕಲಿತು, ನದಿ ತಣ್ಣಗೇ ಹರಿಯುವಂತೆ ಹಾಡುತ್ತಿದ್ದ. ಯಾಕೋ ಬಾಲ್ಯದಲ್ಲಿ ತಾನು ಕೇಳುತ್ತಿದ್ದ ಯಕ್ಷಗಾನದ ಪದ ಅವನಿಗೆ ನಿದ್ದೆಯಲ್ಲೂ ಬಂದಂತಾಗುತ್ತಿತ್ತು. ಕಲಿತರೆ ಯಕ್ಷಗಾನದ